# 7. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ತಟ್ಟೆಹಳ್ಳಿ ಕ್ಯಾಂಪ್

ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲ್ಲೂಕಿನ ಕಲ್ಲಿಹಾಳ್ ಪೋಸ್ಟ್ ಅರಹತೊಳಲು ಕ್ಲಸ್ಟರ್‌ನ ತಟ್ಟೆಹಳ್ಳಿ ಕ್ಯಾಂಪ್ ಊರಿನಲ್ಲಿರುವ ಶಾಲೆ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ತಟ್ಟೆಹಳ್ಳಿ ಕ್ಯಾಂಪ್ ಗ್ರಾಮದಲ್ಲಿರುವ ಕುಟುಂಬದವರು ವಲಸೆ ಬಂದಂತಹ ಕುಟುಂಬಗಳು. ಊರಿನಲ್ಲಿರುವ ಶಾಲೆಯ ವಿಸ್ತೀರ್ಣ 55*200 ಇದ್ದು, ಈ ಶಾಲೆ ಪ್ರಾರಂಭವಾಗಿದ್ದು 1997ರಲ್ಲಿ ಈ ಶಾಲೆಯಲ್ಲಿ ಪ್ರಸ್ತುತ ವಿದ್ಯಾಭ್ಯಾಸ ಮಾಡುತ್ತಿರುವ ಮಕ್ಕಳ ಸಂಖ್ಯೆ 41. ಈ ಶಾಲೆಯು 1 ರಿಂದ 5ನೇ ತರಗತಿ ಒಳಗೊಂಡಿದ್ದು ಶಿಕ್ಷಕರಾದ ಶ್ರೀಮತಿ ನಿರ್ಮಲ ತಿವಾರಿ ಮತ್ತು ಶ್ರೀಯುತ ರಾಜಶೇಖರ್ ಎಸ್ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಶಾಲಾ ಅಕ್ಷರ ದಾಸೋಹದಲ್ಲಿ ಅಡುಗೆಯವರಾಗಿ ಶ್ರಿಮತಿ ವರದಮ್ಮ ಮತ್ತು ಶ್ರೀಮತಿ ಕವಿತ ಎಂಬುವರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯ ಸುತ್ತಲೂ ಕಾಂಪೌಂಡ್ ವ್ಯವಸ್ಥೆ ಇದ್ದು ಹಚ್ಚ ಹಸುರಾದ ಶಾಲೆಯ ಮೈದಾನ, ಶಾಲೆಯು ಸುಂದರ ನೋಟ ಹೊಂದಿದೆ ವರ್ಷದಿಂದ ವರ್ಷಕ್ಕೆ ದಾಖಲಾತಿಯಲ್ಲಿ ಏರಿಕೆ ಕಾಣುತ್ತಿದ್ದು, ಇದು ಶಿಕ್ಷಕರ ಪರಿಶ್ರಮದಿಂದ ಆಗಿದೆ. ಮಕ್ಕಳ ಕಲಿಕೆ ಮಕ್ಕಳ ಪ್ರತಿಭಾ ಕಾರಂಜಿ, ಸ್ಪಷ್ಟ ಓದು ಶುದ್ಧ ಬರಹ ಎಲ್ಲ ಕಾರ್ಯಕ್ರಮದಲ್ಲಿ ಕ್ಲಸ್ಟರ್‌ನಲ್ಲಿಯೇ ಅತ್ಯುತ್ತಮವಾದ ಶಾಲೆಯಾಗಿದೆ. ರೈಲು ಮಾದರಿಯ ಶಾಲೆಯಾಗಿದ್ದು ನೋಡಲು ಅಕರ್ಷಣೆಯಾಗಿದೆ ಹಾಗೂ ಉತ್ತಮ ಗುಣಾತ್ಮಕ ಶಿಕ್ಷಣ ಪಡೆಯಲು ಸಹಕಾರಿಯಾಗಿದೆ.

## ಶಾಲೆಯಲ್ಲಿ ಆದ ಸಾಧನೆಗಳು

ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ತಟ್ಟೆಹಳ್ಳಿ ಕ್ಯಾಂಪ್ ಶಾಲೆಯಲ್ಲಿ ಸುಮಾರು 5 ವರ್ಷಗಳಿಂದ ಶಾಲೆಯಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ 30 ಇದ್ದು ವಲಸೆ ಬಂದಂತಹ ಕುಟುಂಬಗಳು ಆದ್ದರಿಂದ ಶಿಕ್ಷಣದಲ್ಲಿ ನಿರಾಸಕ್ತಿ. ಬಡತನ, ಸಾಕ್ಷರತೆಯ ಕೊರತೆ ಇದ್ದು ಜ್ಞಾನ ಹೆಚ್ಚಿರಲಿಲ್ಲ ಹಾಗೂ ಪದೆ ಪದೆ ವಲಸೆ ಹೋಗುತ್ತಿದ್ದರು. ಇದನ್ನು ಕಂಡಂತಹ ನಾವುಗಳು ಮನೆ ಮನೆಗೆ ಭೇಟಿ ನೀಡಿ, ಶಿಕ್ಷಣ ಪಡೆದರೆ ಸರ್ಕಾರದಿಂದ ದೊರೆಯುವ ಅನುಕೂಲ, ಮುಂದಿನ ಭವಿಷ್ಯಕ್ಕಾಗಿ ಶಿಕ್ಷಣ ಅವಶ್ಯಕವಾಗಿದೆ ಎಂದು ಪಾಲಕರ–ಪೋಷಕರ ಮನವೊಲಿಸಿ ಶಾಲೆಗೆ ಕರೆತರಲಾಯಿತು.

ದಾಖಲಾತಿಯನ್ನು ಹೆಚ್ಚಿಸಬೇಕಾದರೆ ಶಾಲೆಯ ಮೂಲಭೂತ ಸೌಕರ್ಯಗಳ ಕೊರತೆ ಇದ್ದು ಶಾಲೆಯ ಸುತ್ತಲು ಕಾಂಪೌಂಡ್ ವ್ಯವಸ್ಥೆಯನ್ನು ಶ್ರೀಯುತ ವೆಂಕಯ್ಯ ನಾಯ್ಡುರವರ ಅನುದಾನದಲ್ಲಿ ನಿರ್ಮಿಸಲಾಯಿತು. ನಂತರ ಶಾಲೆಯ ಸುತ್ತಲು ಗಿಡಗಳು, ಹೂಗಿಡಗಳು, ಬೆಲೆಬಾಳುವ ಗಿಡಗಳನ್ನು ಬೆಳೆಸಿ ಶಾಲಾ ಪರಿಸರವನ್ನು ಸುಂದರವಾಗಿ ಕಾಣಲು ಶ್ರಮಿಸಿದ್ದೇವೆ. ಶಾಲಾ ಪರಿಸರದ ಜೊತೆಗೆ ಉತ್ತಮ ಕಲಿಕೆ ಮೂಡಿಸಿದ್ದರಿಂದ ಶಾಲಾ ದಾಖಲಾತಿಯಲ್ಲಿ ಗಣನೀಯವಾಗಿ ಏರಿಕೆ ಕಂಡಿದೆ.

## ಹೆಚ್ಚುವರಿ ಕೊಠಡಿ

ಶಾಲೆಯಲ್ಲಿ ಮಕ್ಕಳ ದಾಖಲಾತಿ ಹೆಚ್ಚುತ್ತಿರುವುದರಿಂದ, ಹೆಚ್ಚಿನ ಕೊಠಡಿ ಅವಶ್ಯಕತೆ ಇದ್ದು ಶ್ರೀಯುತ ಬಿ.ಹೆಚ್. ಶಂಕರಮೂರ್ತಿ, ವಿಧಾನಸಭಾ ಸಭಾಪತಿ ಅವರ ಅನುದಾನದಲ್ಲಿ ಹೆಚ್ಚುವರಿ ಕೊಠಡಿಯನ್ನು ಮಾಡಿಸಲಾಯಿತು. ಈಗ ಪ್ರಸ್ತುತ 4 ಕೊಠಡಿಗಳು ಇದ್ದು ಸುಸಜ್ಜಿತವಾಗಿ ಮಕ್ಕಳು ಕುಳಿತು ಉತ್ತಮ ಕಲಿಕೆಗೆ ಸಹಕಾರಿಯಾಗಿದೆ ಈ ಕೊಠಡಿಯ ಉದ್ಘಾಟನೆಗೆ ಶ್ರೀಯುತರನ್ನು ಕರೆಸಿ ಸನ್ಮಾನಿಸಲಾಯಿತು.

`

## ಶಾಲಾ ಕುಡಿಯುವ ನೀರಿನ ವ್ಯವಸ್ಥೆ

ಶಾಲೆಯಲ್ಲಿ ಕುಡಿಯಲು ಹಾಗೂ ಅಕ್ಷರ ದಾಸೋಹಕ್ಕೆ ನೀರಿನ ಕೊರತೆಯಿತ್ತು. ಜಿಲ್ಲಾ ಪಂಚಾಯಿತಿ ಸದಸ್ಯರಾದ ಶ್ರೀಯುತ ಹೆಚ್.ಎಲ್. ಶಡಕ್ಷರಿ ಅವರ ಅನುದಾನದಲ್ಲಿ ಕೊಳವೆಬಾವಿ ಮಾಡಿಸಿ ಕುಡಿಯಲು ಹಾಗೂ ಅಡುಗೆಗೆ ಬಳಸಲು ಶುದ್ದ ಕುಡಿಯುವ ನೀರನ್ನು ಪುರೈಸಲಾಯಿತು. ಶಾಲೆಯ ಕೈತೋಟಕ್ಕೂ ಸಹ ನೀರನ್ನು ಕೊಳವೆ ಬಾವಿಯ ಮೂಲಕ ಗಿಡಗಳಿಗೆ ನೀರು ಹಾಕಿ ಬೆಳೆಸುತ್ತಿದ್ದೇವೆ. ಹೆಚ್ಚಿನ ನೀರು ಕುಡಿಯಲು ಗ್ರಾಮಪಂಚಾಯಿತಿಯ ನಲ್ಲಿಯನ್ನು ಹಾಕಿಸಿದ್ದು, ಕುಡಿಯಲು ಬಳಸುತ್ತಿದ್ದೇವೆ ಹಾಗೂ **"ಕುಡಿಯಲು ಶುದ್ದ ನೀರು"** ಒದಗಿಸಲು ಎಸ್.ಬಿ.ಐ. ಭದ್ರಾವತಿ ಇವರಿಂದ ಫಿಲ್ಟರ್‌ನ್ನು ಪಡೆದಿದ್ದು, ಮಕ್ಕಳಿಗೆ ಶುದ್ದ ನೀರು ಕುಡಿಯಲು ಸಹಾಯಕವಾಗಿದೆ.

## ಶೌಚಾಲಯ

ಶಾಲಯು ಸುಸಜ್ಜಿತವಾದ ಶೌಚಾಲಯವನ್ನು ಹೊಂದಿದ್ದು ಗಂಡುಮಕ್ಕಳಿಗೆ ಪ್ರತ್ಯೇಕ ಹಾಗೂ ಹೆಣ್ಣುಮಕ್ಕಳಿಗೆ ಪ್ರತ್ಯೇಕ ಶೌಚಾಲಯ ಬಳಕೆಗೆ ಉಪಯೋಗವಾಗಿದೆ. ಶೌಚಾಲಯ ಬಳಸಿದ ನಂತರ ಕೈತೊಳೆಯಲು ಸೋಪು, ವಾಶ್‌ಬೇಸಿನ್, ಟವಲ್ ಇದ್ದು ಸುಸಜ್ಜಿತವಾಗಿದೆ. ಕನ್ನಡಿಯನ್ನು ಮತ್ತು ಎರಡು ನೀರಿನ ಸಣ್ಣ ತೊಟ್ಟಿಯನ್ನು ನಿರ್ಮಿಸಿದ್ದು ನೀರಿನ ಬಳಕೆಗೆ ಯೋಗ್ಯವಾಗಿದೆ.

## ಶಾಲೆಯಲ್ಲಿ ಮಕ್ಕಳ ಕಲಿಕೆ

ಮೊದಲು ಶಾಲೆಯಲ್ಲಿ ಮಕ್ಕಳ ಗೈರು ಹಾಜರಿ ಹೆಚ್ಚು ಇತ್ತು. ನಂತರದಲ್ಲಿ ಶಿಕ್ಷಕರ ಪರಿಶ್ರಮ ಮತ್ತು ಚಟುವಟಿಕೆಯುಕ್ತ ಬೋಧನೆ, ಉತ್ತಮ ಕಲಿಕಾ ವಾತಾವರಣದಿಂದ ಗೈರುಹಾಜರಿ ಕಡಿಮೆಯಾಗುತ್ತ ಬಂದಿತ್ತು. ಶಾಲೆಯಲ್ಲಿ ನಲಿ-ಕಲಿ ಬೊಧನೆಯು ಬಹುವರ್ಗ ಬೋಧನೆಯನ್ನು ಮಾಡಿಸಿ ಸುಸಜ್ಜಿತವಾದ ಕಲಿಕಾ ವಾತಾವರಣ ಕಲ್ಪಿಸಿ ಶಾಲೆಯಲ್ಲಿ ಗುಂಪು ತಟ್ಟೆಗಳ ಮೂಲಕ ಕಾರ್ಡಗಳನ್ನು ಉಪಯೋಗಿಸಿ ಮೈಲುಗಲ್ಲುವಾರು, ಮೆಟ್ಟಿಲುವಾರು, ಕಲಿಕೆಯನ್ನು ಮೂಡಿಸುತ್ತಿದ್ದೇವೆ. ಶಾಲೆಯಲ್ಲಿ ಕನ್ನಡ, ಗಣಿತ, ಪರಿಸರ ಅಧ್ಯಯನದ ಜೋತೆಗೆ ಇಂಗ್ಲೀಷ್ ಕಲಿಕೆಯನ್ನು ಚಟುವಟಿಕೆ ಯುಕ್ತವಾಗಿ ಕಲಿಸುತ್ತಿದ್ದೇವೆ. ನಮ್ಮ ಶಾಲೆಯಲ್ಲಿ ಕಲಿತ ಮಕ್ಕಳೆಲ್ಲರೂ 5ನೇ ತರಗತಿ ಉತ್ತೀರ್ಣರಾಗಿ 6ನೇ ತರಗತಿಗೆ ಇಂಗ್ಲೀಷ್ ಮಾಧ್ಯಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕಲ್ಲಿಹಾಳ್‌ಗೆ ಸೇರುತ್ತಾರೆ ಸಮಯಕ್ಕೆ ಸರಿಯಾಗಿ ಶಾಲಾ ಪ್ರಾರ್ಥನೆ ವೇಳಾ ಪಟ್ಟಿಯಂತೆ ಎಲ್ಲಾ ವಿಷಯಗಳನ್ನು ಬೋಧಿಸುತ್ತ ಘಟಕ ಪರೀಕ್ಷೆ, ರೂಪಣಾತ್ಮಕ ಪರೀಕ್ಷೆ, ಸಂಕಲನತ್ಮಾಕ ಪರೀಕ್ಷೆ ಮಾಡುತ್ತಿದ್ದೇವೆ. ಜೊತೆಗೆ ವಾರದ ಕೊನೆಯ ದಿನ ಪ್ರತಿ ಶನಿವಾರದಲ್ಲಿ ಕಲಿತಂತಹ ವಿಷಯ ಘಟಕವನ್ನು ಮೆಲಕು ಹಾಕಿ ಪರೀಕ್ಷೆ ಏರ್ಪಡಿಸಿ ಮಕ್ಕಳಿಗೆ ಪ್ರಶಂಸೆ ಹಾಗೂ ಬಹಮಾನ ನೀಡುತ್ತಿದ್ದೇವೆ.

## ಶಾಲಾ ಆಕರ್ಷಣೆ

ಶಾಲೆಯ ಉತ್ತಮ ಆಕರ್ಷಣೆಯಿಂದ ಮಕ್ಕಳು ಸಂತೋಷವಾಗಿ ಶಾಲೆಗೆ ಆಗಮಿಸಿ ಕಲಿಯಲು ಶ್ರೀಮತಿ ನಿರ್ಮಲ ತಿವಾರಿ ಶಿಕ್ಷಕಿಯರು ತಮ್ಮ ಸ್ವಂತ ಹಣದಲ್ಲಿ ರೂ:30000/- ವನ್ನು ಉಪಯೋಗಿಸಿ ಶಾಲೆಯ ಕೊಠಡಿಗೆ ರೈಲು ಮಾದರಿಯಲ್ಲಿ ಬಣ್ಣವನ್ನು ಹೊಡೆಯಿಸಿರುತ್ತಾರೆ. ಈಗಿನ ಕಾಲದಲ್ಲಿ ಹೆಚ್ಚಿನ ಪೋಷಕರು ವಿದ್ಯಾರ್ಥಿಗಳು ಹೆಚ್ಚು ಆಕರ್ಷಣೆಯನ್ನು ಇಷ್ಟಪಡುತ್ತಿದ್ದು ವಿನೂತನ ರೀತಿಯಲ್ಲಿ ರೈಲು

`
ಭೋಗಿ ಇಂಜಿನ್, ಶಾಲೆಯ ಬಾಗಿಲನ್ನು ರೈಲು ಬಾಗಿಲಿನ ಹಾಗೆ ಹಾಗೂ ಶಾಲಾ ಶೌಚಾಲಯವನ್ನು ಲಗೇಜ್ ರೂಮಿನ ಹಾಗೆ ಬಣ್ಣ ಹೊಡಿಸಿರುತ್ತಾರೆ. ಇದಲ್ಲದೆ ಶಾಲೆಯ ಮುಂಭಾಗದ ಕೈತೋಟ ಹೂವಿನ ಗಿಡಗಳು ಸಣ್ಣ ಸಸ್ಯಗಳು ಔಷದಿ ಸಸ್ಯಗಳು ಬೆಳೆಬಾಳುವ ಗಿಡಗಳು ಬೆಳೆಸಿರುತ್ತೇವೆ. ಶಾಲೆಯ ಹಿಂಬಾಗ ಕಾಂಪೌಂಡ್, ಒಳಗಡೆ ಸೊಪ್ಪು-ತರಕಾರಿಗಳನ್ನು ಬೆಳೆಸುತ್ತಿದ್ದು, ಶಾಲೆಯ ಬಿಸಿಊಟಕ್ಕೆ ಸಹಕಾರಿಯಾಗಿದೆ. ಬೇರೆ ಬೇರೆ ಜಾತಿಯ ಗಿಡಗಳನ್ನು ಬೆಳೆಸಿದ್ದು ಪಾಠಕ್ಕೆ ಪೂರಕವಾಗಿ ಬಳಸಿಕೊಳ್ಳುತ್ತೇವೆ. ಬಿಸಿ ಊಟದ ಕೊಣೆಯಲ್ಲಿ ಆಹಾರ ತಯಾರಿಕೆಗಾಗಿ ಉತ್ತಮ ಗುಣಮಟ್ಟದ ತರಕಾರಿ ಬಳಸಲಾಗುತ್ತಿದೆ. ಅಡುಗೆಯವರು ತಲೆಗೆ ಬಟ್ಟೆ ಧರಿಸಿ ಸ್ವಚ್ಚತೆಯಿಂದ ಅಡುಗೆ ತಯಾರಿಸುತ್ತಾರೆ.

## ಶಾಲೆಯನ್ನು ಅಭಿವೃದ್ಧಿ ಪಥದಲ್ಲಿ ಸಾಗಲು ಬಂದ ಸಮಸ್ಯೆಗಳು ಮತ್ತು ಪರಿಹರಿಸಿದ ವಿಧಾನ

**ದಾಖಲಾತಿ ಸಮಸ್ಯೆ :-** ತಟ್ಟೆಹಳ್ಳಿ ಕ್ಯಾಂಪ್ ಊರಿನ ಕುಟುಂಬಗಳು ವಲಸೆ ಬಂದ ಕುಟುಂಬ ಹಾಗೂ ಬಡತನದ ಕುಟುಂಬಗಳಾಗಿದ್ದು, ಸಾಕ್ಷರತೆ ಕೊರತೆಯಿದ್ದು ಮಕ್ಕಳಿಗೆ **ಶಾಲೆಗೆ ಕಳುಹಿಸುತ್ತಿರಲಿಲ್ಲ** ಹಾಗೂ ಶಾಲೆಗೆ ದಾಖಲು ಮಾಡಲುತ್ತಿರಲಿಲ್ಲ ಇದನ್ನು ಮನಗಂಡ ಶಿಕ್ಷಕರುಗಳು, ಮನೆಮನೆಗಳಿ ಭೇಟಿ ನೀಡಿ ಶಿಕ್ಷಣದ ಮಹತ್ವ, ಶಿಕ್ಷಣವಂತರಾದರೆ ಮುಂದಾಗುವ ಅನುಕೂಲಗಳು, ಶಾಲೆಯಿಂದ ದೊರೆಯುವ ಸವಲತ್ತುಗಳನ್ನು ಮನವರಿಕೆ ಮಾಡಿ ಪ್ರತಿದಿನ ಮನೆಮನೆಗೆ ಭೇಟಿ ನೀಡಿ ಶಾಲೆಗೆ ಕರೆತರಲಾಯಿತು. ಪೋಷಕರ ಜೊತೆ ಉತ್ತಮ ಬಾಂಧವ್ಯ ಇದ್ದು, ಅವರ ಮನಸನ್ನು ಗೆದ್ದು, ಮಕ್ಕಳನ್ನು ಶಾಲೆಗೆ ಪ್ರತಿದಿನ ಬರಲು ಪ್ರೇರೇಪಿಸಿದೆವು. ಎಸ್.ಡಿ.ಎಂ.ಸಿ. ರವರ, ಊರಿನ ಹಿರಿಯರ ಸಹಕಾರದಿಂದ ಶಾಲೆಯಲ್ಲಿ ಹಾಗೂ ಊರಿನಲ್ಲಿ ಚಿಕ್ಕದಾದ ಸಭೆಯನ್ನು ಏರ್ಪಡಿಸಿ ಮಕ್ಕಳನ್ನು ಶಾಲೆಗೆ ಕಳುಹಿಸದೆ ಮನೆಯಲ್ಲಿ ಇಟ್ಟುಕೊಂಡರೆ ಹಾಗೂ ಕೆಲಸಕ್ಕೆ ನೇಮಿಸಿದರೆ ಶಿಕ್ಷಾರ್ಹ ಅಪರಾಧ ಎಂದು ಮನಗಾಣಿಸಿ ಶಾಲೆಗೆ ಕರೆತರಲಾಯಿತು. ಪೋಷಕರಿಗೆ ಪ್ರಶಂಸೆಯ ಮಾತುಗಳಿಂದ ಅವರ ಮನಸ್ಸು ಕೇಂದ್ರಿಕರಿಸಿದೆವು.

## ಸಾರ್ವಜನಿಕ ಸ್ವತ್ತು, ಶಾಲೆಯ ಪರಿಸರ ಹಾಳು ಮಾಡುತ್ತಿದ್ದುದು

ಶಾಲೆಯೇ ದೇವಾಲಯ ಶಾಲೆಯಲ್ಲಿ ಕಲಿತ ವಿದ್ಯೆ ಜೀವನದ ದಿಕ್ಕನ್ನು ಬದಲಾಯಿಸುತ್ತದೆ ಎಂಬ ಮಾತನ್ನು ಕೇಳಿರುತ್ತೇವೆ. ಶಾಲೆಯ ಮೈದಾನದಲ್ಲಿ ಗಿಡಗಳನ್ನು ಬೆಳೆಸಿದಾಗ ರಜಾ ದಿನಗಳಲ್ಲಿ ಹಾಳು ಮಾಡುತ್ತಿದ್ದರು. ಸಾರ್ವಜನಿಕ ಸ್ವತ್ತು ಹಾಳು ಮಾಡಬಾರದೆಂಬ ಜ್ಞಾನದ ಕೊರತೆ ಇತ್ತು. ರಜಾ ದಿನಗಳಲ್ಲಿ ಶಾಲೆಯ ಕಿಟಕಿ, ಹೆಂಚು, ಬಾಗಿಲು ಮುರಿಯುವುದು, ಗಿಡಗಳನ್ನು ಮುರಿಯುವುದು ಇತ್ಯಾದಿ ಅನೇಕ ಸಮಸ್ಯೆಗಳಿದ್ದವು. ಶಾಲೆಯ ಪರಿಸರ, ಶಾಲೆಯ ಸ್ವತ್ತನ್ನು ಉಳಿಸಬೇಕೆಂದು ಶಾಲೆಯ ಸುತ್ತಲೂ ಕಾಂಪೌಂಡ್ ವ್ಯವಸ್ಥೆ ಮಾಡಿಸಿದರು, ಕೆಲ ಕಿಡಿಗೇಡಿಗಳು ಕಾಂಪೌಂಡ್ ಹಾರಿಬಂದು ಶಾಲೆಯ ವಾತಾವರಣ ಹಾಳು ಮಾಡುತ್ತಿದ್ದರು. ನಂತರ ಮತ್ತೊಂದು ಯೋಚನೆ ಮಾಡಿ ಕಾಂಪೌಂಡ್‌ನ ಮೇಲೆ ಗ್ಲಾಸ್ ಹಾಕಿಸಿದೆವು, ರಜಾ ದಿನಗಳಲ್ಲಿ ಬರುವ ಮಕ್ಕಳು ಜನರನ್ನು ಗುರುತಿಸಿ ಅವರ ಮನೆಗಳಿಗೆ ಭೇಟಿ ನೀಡಿ ಅವರಿಗೆ ತಿಳಿ ಹೇಳಿದೆವು. ಇದು ನಮ್ಮ ಸ್ವತ್ತು, ನಮ್ಮೂರ ಶಾಲೆ ನಮ್ಮ ದೇವಾಲಯ ಅದನ್ನು ಉಳಿಸಿ ಬೆಳೆಸುವುದು ನಮ್ಮ ಕರ್ತವ್ಯ ಎಂಬುದನ್ನು ಮನಗಾಣಿಸಿ ಊರಿನಲ್ಲಿ ಹಲಗೆ ಒಡಿಸಿದೆವು. ಆದರೂ ಸಹ ಸ್ವಲ್ಪ ದಿನಗಳೆದಂತೆ ಅದೇ ರೀತಿ ಆದಾಗ ಮತ್ತೊಂದು ಹೆಜ್ಜೆಯಾಗಿ ಶಾಲೆಯ ಮುಂಬಾಗ ಪೋಲಿಸ್ ಪ್ರಕಟಣೆ ಎಂಬುದನ್ನು ಬರೆದು ಫಲಕ ಅಂಟಿಸಿದೆವು. ಅಂದಿನಿಂದ ಯಾವ ಮಕ್ಕಳು ಶಾಲೆಯ ಸ್ವತ್ತನ್ನು ಹಾಳು ಮಾಡುತ್ತಿಲ್ಲ ಹಾಗೂ ಅವರೆ ಮನಗಂಡು ಈಗ ಪ್ರಶಂಸೆ ಪಡುತ್ತಾರೆ.

## ಸರಾಗವಾಗಿ ಕಲಿಕೆಯ ಸಮಸ್ಯೆ

ಶಾಲೆಯಲ್ಲಿ ಶಿಕ್ಷಕರು ಪಾಠ ಹೇಳಿಕೊಟ್ಟಿದ್ದನ್ನು ಅಲ್ಲಿಗೆ ಬಿಟ್ಟು ಮನೆಯಲ್ಲಿ ಪುಸ್ತಕ ಬಿಸಾಡಿ ಬೆಳಗ್ಗೆ ಪುಸ್ತಕ ತೆಗೆದುಕೊಂಡು ಶಾಲೆಗೆ ಬರುವುದು ಹೋಂವರ್ಕ ಮಾಡದೆ, ಶಿಸ್ತು ಇಲ್ಲದ ರೀತಿಯಲ್ಲಿ ಅದೇ ಬಟ್ಟೆಯಲ್ಲಿ ಮಲಗಿ ಅದೇ ಬಟ್ಟೆಯಲ್ಲಿ ಶಾಲೆಗೆ ಬರುವುದು. ವೈಯಕ್ತಿಕ ಸ್ವಚ್ಛತೆ ಇತ್ಯಾದಿ ಅನೇಕ ಸಮಸ್ಯೆಗಳಿದ್ದವು. ಶಾಲೆ ದೇವಾಲಯವಿದ್ದಂತೆ ದೇವಾಸ್ಥಾನಕ್ಕೆ ಹೋಗಬೇಕಾದರೆ ಹೇಗೆ ಸ್ವಚ್ಛವಾಗಿ ಸ್ನಾನ ಮಾಡಿ ತೊಳೆದಿರುವ ಬಟ್ಟೆ ಹಾಕಿಕೊಂಡು ಹೋಗುತ್ತೇವೆಯೋ ಹಾಗೆಯೆ ಶಾಲೆಯು ನಮಗೆ ಜ್ಞಾನ ನೀಡುತ್ತದೆ. ಪುಸ್ತಕ ಶಾರದಾದೇವಿ ವಿದ್ಯಾದಾತೆ. ನಾವು ಪುಸ್ತಕ ಮತ್ತು ಶಾಲೆಯನ್ನು ಪ್ರೀತಿ ಗೌರವದಿಂದ ಕಾಣಿಸಿದರೆ ವಿದ್ಯಾದಾತೆ ನಮಗೆ ವಿದ್ಯೆ ಕರುಣಿಸುವಳು ಎಂಬ ಅಂಶದೊಂದಿಗೆ ಪೋಷಕರು ಸಭೆ ಕರೆದು ಶಿಸ್ತಿನ ಬಗ್ಗೆ ಹಾಗೂ ಶಿಕ್ಷಕರು ಪ್ರತಿ ದಿನ ನೀಡಿದ ಹೋಂವರ್ಕ ಹಾಗೂ ಮನೆಯಲ್ಲಿ ಮಕ್ಕಳಿಗೆ ಓದಲು ತಿಳಿಸುವುದು ಸರಿಯಾಗಿ ಓದದೆ ಇದ್ದರೆ ಶಾಲೆಯ ಶಿಕ್ಷಕರಿಗೆ ಆಗಾಗ ಭೇಟಿ ನೀಡಿ ಮಕ್ಕಳ ವಿದ್ಯಾಭ್ಯಾಸ ವಿಚಾರಿಸಲು ತಿಳಿಸಿದೆವು. ಮಕ್ಕಳಿಗೆ ವಿನೂತನವಾದ ಚಟುವಟಿಕೆಗಳನ್ನು ಬಳಸಿ ಮಕ್ಕಳಿಗೆ ಅರ್ಥವಾಗುವ ಹಾಗೆ ಪ್ರಾಯೋಗಿಕವಾಗಿ ಚಿತ್ರಪಟಗಳ ಮೂಲಕ ಜ್ಞಾನ ತುಂಬುತ್ತಿದ್ದೆವು. ಈ ಸಮಸ್ಯೆಗಳ ಜೊತೆಗೆ ಬಡತನದ ರೇಖೆಯಲ್ಲಿರುವ ಕುಟುಂಬಗಳಾದ್ದರಿಂದ ದಾನಿಗಳ / ಸಮುದಾಯ ಸಹಭಾಗಿತ್ವ ಸಮಸ್ಯೆಗಳಿದ್ದವು. ಆದರೂ ಇದೆಲ್ಲವನ್ನೂ ಮೆಟ್ಟಿ ನಿಂತ ಶ್ರೀಮತಿ ನಿರ್ಮಲ ತಿವಾರಿಯವರು ಶಾಲೆಯನ್ನು ಶಾಲಾ ಪರಿಸರದ ವಾತಾವರಣವನ್ನು ಬದಲಾವಣೆ ಮಾಡಬೇಕು ಎಂದು ಮನಸ್ಸು ಮಾಡಿ ರೂ:30000/- ಖರ್ಚಿನಲ್ಲಿ ರೈಲು ಮಾದರಿಯಲ್ಲಿ ಶಾಲೆ ಚಿತ್ರಣವನ್ನು ಬದಲಾಯಿಸಿದರು.

## ಉಪಸಂಹಾರ:-

- ಶಾಲೆಯ ಪರಿಸರ ಉತ್ತಮ ರೀತಿಯಲ್ಲಿ ಮೂಡಿಬಂದಿತು
- ಶಾಲೆಯ ಉತ್ತಮ ದಾಖಲಾತಿ ಹಾಗೂ ಹಾಜರಾತಿ
- ಶಾಲೆಯಲ್ಲಿ ಮಕ್ಕಳ ಶಿಸ್ತುಬದ್ಧ ಕಲಿಕೆ
- ಮಕ್ಕಳು ಶಾಲೆಯಲ್ಲಿ ಸಂತಸದಿಂದ ನಿರ್ಭಯ ವಾತಾವರಣದಲ್ಲಿ ಉತ್ತಮ ಕಲಿಕೆ
- ಗ್ರಾಮದ ಎಲ್ಲಾ ಮಕ್ಕಳು ಗೈರುಹಾಜರಾಗದೆ ಶಾಲೆಯ ಕಲಿಕೆಯಲ್ಲಿ ತೊಡಗಿರುವುದು
- ಶಾಲೆಯಲ್ಲಿರುವ ಉತ್ತಮ ಕಲಿಕೆ ಗುರುತಿಸಿ ಬೇರೆ ಬೇರೆ ಊರಿನಿಂದ ಸಂಬಂಧಿಕರ ಮಕ್ಕಳನ್ನು ನಮ್ಮ ಶಾಲೆಯಲ್ಲಿ ಸೇರಿಸಿರುವುದು
- ನಲಿ-ಕಲಿ ಇಂಗ್ಲೀಷ್ ಕಲಿಕೆ ಎಲ್ಲಾ ವಿಷಯಗಳನ್ನು ಸರಾಗವಾಗಿ ಓದಲು ಮತ್ತು ಬರೆಯಲು ಮಕ್ಕಳು ಕಲಿತಿರುತ್ತಾರೆ.

ಈ ಎಲ್ಲಾ ಕಾರ್ಯಗಳು ಕೇವಲ ಒಬ್ಬರಿಂದ ಸಾಧ್ಯವಾಗಿಲ್ಲ ಎಸ್.ಡಿ.ಎಂ.ಸಿ ಕಮಿಟಿಯವರು, ಊರಿನ ಹಿರಿಯರು ಪೋಷಕರು, ಶಿಕ್ಷಕರು, ಶಾಸಕರು, ಸದಸ್ಯರುಗಳ ನೆರವಿನಿಂದ ಗ್ರಾಮದಲ್ಲಿ ಉತ್ತಮ ಶಿಕ್ಷಣ ಪಡೆಯಲು ಸಹಕಾರಿಯಾಗಿರುವಂತೆ ಕೆಲಸ ನಿರ್ವಹಿಸಿರುತ್ತಾರೆ.






ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ
INDIAN


BHADRAVATHI



